# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ.)

ದೂರವಾಣಿ ಸಂಖ್ಯೆ: 08222-240377
ಮೊಬೈಲ್‌ಸಂಖ್ಯೆ:9448499992
E-mail: aeebilikere@rediffmail.com

ಸಹಾಯಕ ಕಾರ್ಯಪಾಲಕ ಅಭಿಯಂತರರು(ವಿ),
ರವರ ಕಛೇರಿ ಚಾ.ವಿ.ಸ.ನಿ.ನಿ.,
ಕಾ ಮತ್ತು ಪಾ ಉಪವಿಭಾಗ, ಬಿಳಿಕೆರೆ.

ಕ್ರ.ಸಂ.: ಸ.ಕಾ.ನಿ.ಇಂ(ವಿ)/ಹಿ.ಸ/ತಾಂಸ/ಸೆಸ್ಕ್/ಬಿಳಿಕೆರೆ/ಉ.ವಿ/2019/ 602 ದಿನಾಂಕ: 16.09.19

ದಿನಾಂಕ: 16.09.2019 ರಂದು ಮಧ್ಯಾಹ್ನ 03:00 ಗಂಟೆಗೆ ಮಾನ್ಯ ಅಧಿಕ್ಷಕ ಇಂಜಿನಿಯರ್ (ಪ್ರಭಾರ), ಶ್ರೀ ಮುಜಾಮಿಲ್ ಅಹ್ಮದ್ ರವರ ಅಧ್ಯಕ್ಷತೆಯಲ್ಲಿ ನಡೆದ ಬಿಳಿಕೆರೆ ಕಾರ್ಯ ಮತ್ತು ಪಾಲನ ಉಪ ವಿಭಾಗದ ಗ್ರಾಹಕರ ಸಂಪರ್ಕ ಸಭೆಯ ನಡಾವಳಿಗಳು.

**ಸಭೆಯಲ್ಲಿ ಹಾಜರಿದ್ದವರು:**

1. ಶ್ರೀ ಮುಜಾಮಿಲ್ ಅಹ್ಮದ್ ರವರು, ಅಧೀಕ್ಷಕ ಇಂಜಿನಿಯರ್ (ಪ್ರಭಾರ), ಕಾ ಮತ್ತು ಪಾ ವೃತ್ತ, ಚಾ.ವಿ.ಸ.ನಿ.ನಿ., ಮೈಸೂರು.
2. ಶ್ರೀ ಸುನೀಲ್ ರವರು ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ವಿಭಾಗ, ಚಾ.ವಿ.ಸ.ನಿ.ನಿ., ಹುಣಸೂರು.
3. ಶ್ರೀಮತಿ ವಿಜಯರತ್ನ ರವರು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ಉಪ ವಿಭಾಗ ಬಿಳಿಕೆರೆ.
4. ಶ್ರೀಮತಿ ಸುಕ್ರಮ್ಮ, ಹಿರಿಯ ಸಹಾಯಕಿ(ಪ್ರಭಾರ), ಕಂದಾಯ ಶಾಖೆ, ಬಿಳಿಕೆರೆ ಉಪ ವಿಭಾಗ.
5. ಶ್ರೀ ಮಣಿಕಂಠ, ಸಹಾಯಕ ಇಂಜಿನಿಯರ್ (ತಾಂ), ಕಾರ್ಯ ಮತ್ತು ಪಾಲನಾ ಉಪ ವಿಭಾಗ, ಬಿಳಿಕೆರೆ.
6. ಶ್ರೀ ಜಯ್‌ಕುಮಾರ್, ಸಹಾಯಕ ಇಂಜಿನಿಯರ್(ವಿ), ಕಾ ಮತ್ತು ಪಾ ಶಾಖೆ, ಬಿಳಿಕೆರೆ
7. ಶ್ರೀ ಎಂ.ಎಸ್ ಚಂದ್ರಶೇಖರ್, ಕಿರಿಯ ಇಂಜಿನಿಯರ್(ವಿ), ಕಾ ಮತ್ತು ಪಾ ಶಾಖೆ, ಕೆ.ಎಸ್.ಗದ್ದಿಗೆ.
8. ಕುಮಾರಿ ಯಶಸ್ವಿನಿ ಆರ್ ಶೇಖರ್, ಕಿರಿಯ ಇಂಜಿನಿಯರ್(ವಿ), ಕಾ ಮತ್ತು ಪಾ ಶಾಖೆ, ಬೋಳನಹಳ್ಳಿ.

ಸಭೆಯಲ್ಲಿ ಉಪ ಸ್ಥಿತರಿದ್ದಂತಹ ಎಲ್ಲಾ ಅಧಿಕಾರಿಗಳು ಹಾಗೂ ವಿದ್ಯುತ್ ಗ್ರಾಹಕರುಗಳನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಲಾಯಿತು.

ಮಾನ್ಯ ಅಧಿಕ್ಷಕ ಇಂಜಿನಿಯರ್ (ಪ್ರಭಾರ), ರವರು ವಿದ್ಯುತ್ ಜನ ಸಂಪರ್ಕ ಸಭೆಯ ಮಹತ್ವದ ಬಗ್ಗೆ ತಿಳಿಸುತ್ತಾ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಅಯೋಗದ ಸೂಚನೆ ಮೇರೆಗೆ ಪ್ರತಿ ಮೂರು ತಿಂಗಳಿಗೊಮ್ಮೆ ಉಪ ವಿಭಾಗದ ಮಟ್ಟದಲ್ಲಿ ಗ್ರಾಹಕ ಸಂಪರ್ಕ ಸಭೆಯನ್ನು ನಡೆಸಲಾಗುವುದು. ಈ ಸಭೆಯಲ್ಲಿ ಉಪ ವಿಭಾಗದ ವ್ಯಾಪ್ತಿಯ ಗ್ರಾಹಕರುಗಳು ಭಾಗವಹಿಸಿ ವಿದ್ಯುತ್ ಸರಬರಾಜಿನ ಕುಂದು ಕೊರತೆಗಳ ಬಗ್ಗೆ ಚರ್ಚಿಸಿ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಸೇವೆಯನ್ನು ಉನ್ನತ್ತೀಕರಿಸಲು ಅಗತ್ಯವಿರುವ ಸಲಹೆ ಸೂಚನೆಗಳನ್ನು ನೀಡಬಹುದಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ), ಬಿಳಿಕೆರೆ ರವರು ಮಾತನಾಡಿ ಈ ಹಿಂದಿನ ಜನ ಸಂಪರ್ಕ ಸಭೆಯಲ್ಲಿ ಚರ್ಚಿಸಿದ ಒಟ್ಟು 05 ಸಂಖ್ಯೆ ಸಮಸ್ಯೆಗಳು 05 ಸಂಖ್ಯೆ ಸಮಸ್ಯೆಗಳನ್ನು ಬಗೆಹರಿಸಲಾಗಿದೆ ಎಂದು ಸಭೆಗೆ ತಿಳಿಸಿದರು.

ಮುಂದುವರೆದು ಪ್ರಸ್ತುತ ಸಭೆಯಲ್ಲಿ ಹಾಜರಿದ್ದ ಗ್ರಾಹಕರಿಂದ ದೂರುಗಳನ್ನು ಸ್ವೀಕರಿಸಲಾಗಿ ಇದರ ವಿವರ ಈ ಕೆಳಕಂಡಂತಿರುತ್ತದೆ.

Scanned with CamScanner

ಪು.ತಿ.ನೋ

| ಕ್ರ.ಸಂ | ಅರ್ಜಿದಾರರ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ | ವಿಷಯ | ಕ್ರಮ |
|---|---|---|---|
| 1 | ಮಹದೇವು, ಅತ್ತಿಗುಪ್ಪೆ, ಮೊಬೈಲ್ ಸಂಖ್ಯೆ: 818302262 | ಅತ್ತಿಗುಪ್ಪೆ ಗ್ರಾಮದ ಮಹದೇವು ರವರ ಜಮೀನಿನಲ್ಲಿ ಜೋತು ಬಿದ್ದಿರುವ ವೈರುಗಳನ್ನು ಸರಿಪಡಿಸಿಕೊಡಲು ಕೋರಿದರು. | ಮಾನ್ಯ ಅಧೀಕ್ಷಕ ಇಂಜಿನಿಯರ್(ಪ್ರಭಾರ), ರವರು ಮಾತನಾಡಿ ಬೋಳನಹಳ್ಳಿ ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ ಅಂದಾಜು ಪಟ್ಟಿ ತಯಾರಿಸಿ ಸಲ್ಲಿಸುವಂತೆ ಸೂಚಿಸಿದರು. |
| 2 | ಸಿದ್ದೇಗೌಡ, ಹಳೇಪುರ ಗ್ರಾಮ ಮೊಬೈಲ್ ಸಂಖ್ಯೆ: 9380031521 | ಹಳೇಪುರ ಗ್ರಾಮದ ಸರ್ಕಾರಿ ಶಾಲೆಯ ಹತ್ತಿರ ವಿದ್ಯುತ್ ಕಂಬವನ್ನು ಅಳವಡಿಸಲು ಕೋರಿರುತ್ತಾರೆ. | ಮಾನ್ಯ ಅಧೀಕ್ಷಕ ಇಂಜಿನಿಯರ್(ಪ್ರಭಾರ), ರವರು ಮಾತನಾಡಿ ಕೆ.ಎಸ್.ಗದ್ದಿಗೆ ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ ಅಂದಾಜು ಪಟ್ಟಿ ತಯಾರಿಸಿ ಸಲ್ಲಿಸುವಂತೆ ಸೂಚಿಸಿದರು. |
| 3 | ಪುಟ್ಟೇಗೌಡ, ಕರಿಮುದ್ದನಹಳ್ಳಿ | 24 ಗಂಟೆಗಳ ನಿರಂತರ ಜ್ಯೋತಿ ವಿದ್ಯುತ್ ಸಂಪರ್ಕ ಕೋರಿದರು. | ಮಾನ್ಯ ಅಧೀಕ್ಷಕ ಇಂಜಿನಿಯರ್(ಪ್ರಭಾರ), ರವರು ಮಾತನಾಡಿ ಕೆ.ಎಸ್.ಗದ್ದಿಗೆ ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ ಅಂದಾಜು ಪಟ್ಟಿ ತಯಾರಿಸಿ ಸಲ್ಲಿಸುವಂತೆ ಸೂಚಿಸಿದರು.. |
| 4 | ಮಹದೇವಪುರ ಗ್ರಾಮಸ್ಥರು | ಗ್ರಾಮದಲ್ಲಿ ಅರಳಿ ಮರಗಳನ್ನು ಕಡಿಯಲು ವಿದ್ಯುತ್ ಸಂಪರ್ಕ ಕಡಿತಗೊಳಿಸುವ ಬಗ್ಗೆ. | ಮಾನ್ಯ ಅಧೀಕ್ಷಕ ಇಂಜಿನಿಯರ್(ಪ್ರಭಾರ), ರವರು ಮಾತನಾಡಿ ಕೆ.ಎಸ್.ಗದ್ದಿಗೆ ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ ಮರಗಳ ರೆಂಬೆಗಳನ್ನು ತೆರವುಗೊಳಿಸಲು ಸೂಚಿಸಲಾಯಿತು. |
| 5 | ಪಾರ್ವತಮ್ಮ ಕೋಂ ಲೇ॥ ಬಸವರಾಜ್ ಚಾರ್, ಬಸವನಹಳ್ಳಿ | ಸ್ಥಾವರ ಸಂಖ್ಯೆ: RGKSG60799 ರ ಸ್ಥಾವರವನ್ನು ಶಾಶ್ವತ ವಿದ್ಯುತ್ ನಿಲುಗಡೆಗೊಳಿಸಿಕೊಡುವ ಬಗ್ಗೆ. | ಮಾನ್ಯ ಅಧೀಕ್ಷಕ ಇಂಜಿನಿಯರ್(ಪ್ರಭಾರ), ರವರು ಮಾತನಾಡಿ ಹಿರಿಯ ಸಹಾಯಕರಿಗೆ ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲಿಸಿ ನಿಗಮದ ನಿಯಮಾನುಸಾರ ಕ್ರಮಕೈಗೊಳ್ಳಲು ಸೂಚಿಸಲಾಯಿತು. |

ಸಭೆಯ ಕೊನೆಯಲ್ಲಿ ಮಾನ್ಯ ಅಧೀಕ್ಷಕ ಇಂಜಿನಿಯರ್ (ಪ್ರಭಾರ) ರವರು ವಿದ್ಯುತ್ ಗ್ರಾಹಕರಿಂದ ಕೇಳಿ ಬಂದಂತಹ ದೂರುಗಳು ಹಾಗೂ ಕುಂದು ಕೊರತೆಗಳ ಬಗ್ಗೆ ಸವಿವರವಾಗಿ ಮಾತನಾಡಿ ಸಭೆಯಲ್ಲಿಯೇ ಕೆಲವು ಅಹವಾಲುಗಳಿಗೆ ಸಂಬಂಧಿಸಿದಂತೆ ಪರಿಹಾರ ಮಾರ್ಗೋಪಾಯಗಳನ್ನು ಅಧಿಕಾರಿಗಳಿಗೆ ತಿಳಿಸಿ ಹಾಗೂ ಇತರೆ ಅಹವಾಲುಗಳಿಗೆ ಸಂಬಂಧಪಟ್ಟಂತೆ ಅದಿಕಾರಿಗಳು ಸ್ಥಳ ಪರಿಶೀಲಿಸಿ ನಿಯಮಾನುಸಾರ ಕ್ರಮಕೈಗೊಂಡು ತೆಗೆದುಕೊಂಡ ಕ್ರಮದ ಬಗ್ಗೆ ಕಟ್ಟುನಿಟ್ಟಾಗಿ ಅನುಪಾಲನಾ ವರದಿ ನೀಡುವಂತೆ ಸೂಚಿಸಿ ಸಭೆಯಲ್ಲಿ ಹಾಜರಿದ್ದ ಎಲ್ಲಾ ವಿದ್ಯುತ್ ಗ್ರಾಹಕರಿಗೆ ಧನ್ಯವಾದಗಳನ್ನು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ಸಭೆಯಲ್ಲಿ ಹಾಜರಿದ್ದವರ ಸಂಖ್ಯೆ : 10
ಮೌಖಿಕ ದೂರುಗಳ ಸಂಖ್ಯೆ : 05
ಪತ್ರಲಿಖಿತ ದೂರುಗಳ ಸಂಖ್ಯೆ : 00

ತಮ್ಮ ವಿಶ್ವಾಸಿ

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಚಾ.ವಿ.ಸ.ನಿ.ನಿ., ಕಾ ಮತ್ತು ಪಾ ಉಪವಿಭಾಗ,
ಬಿಳಿಕೆರೆ

Scanned with CamScanner

ಪ್ರತಿಗಳು:

1. ಮಾನ್ಯ ಅಧೀಕ್ಷಕ ಇಂಜಿನಿಯರ್ (ಪ್ರಭಾರ), ಕಾ ಮತ್ತು ಪಾ ವೃತ್ತ, ಚಾ.ವಿ.ಸ.ನಿ.ನಿ., ಮೈಸೂರು ವರರ ಅವಗಾಹನೆಗಾಗಿ ಸಲ್ಲಿಸಿದೆ.
2. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ವಿಭಾಗ ಚಾ.ವಿ.ಸ.ನಿ.ನಿ., ಹುಣಸೂರು ರವರ ಅವಗಾಹನೆಗಾಗಿ.
3. ಕಛೇರಿ ಪ್ರತಿ

Scanned with CamScanner